ಶ್ರೀ ಬಿ. ಎ. ಉಮರಬ್ಬ.—ಸ್ವಾಮಿ ಬಡವರೇ ಹೆಚ್ಚಾಗಿ ಆಕ್ರಮ ಭೂಮಿಯಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸದ ಮಾಡುತ್ತಿದ್ದಾರೆ. ಅಂತಹವರಿಗೆ ದಂಡವನ್ನು ವಿಧಿಸುತ್ತಿದ್ದೇವೆಂದು ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದೀರಿ. ಯಾವ ಪ್ರಮಾಣದಲ್ಲಿ ಎಷ್ಟು ದಂಡವನ್ನು ವಿಧಿಸುತ್ತೀರಿ ಎಂಬುದನ್ನು ದಯಮಾಡಿ ತಿಳಿಸುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ಬಗ್ಗೆ ಈಗ ನನ್ನಲ್ಲಿ ವಿವರಗಳು ಇಲ್ಲ. ಮಾನ್ಯ ಸದಸ್ಯರಿಗೆ ಬೇಕಾದರೆ ನಾನು ಒದಗಿಸಿಕೊಡುತ್ತೇನೆ. ನಾನು ಮೊದಲೇ ಹೇಳಿದ ಹಾಗೆ ನಾರ್ಮಲ್ ರೇಟ್‌ನಲ್ಲಿ ದಂಡವನ್ನು ವಿಧಿಸುತ್ತೇವೆ.

ಶ್ರೀ ಬಿ. ಎ. ಉಮರಬ್ಬ.—ಮಾನ್ಯ ಅಧ್ಯಕ್ಷರೇ, ಅನೇಕ ಕಡೆಗಳಲ್ಲಿ ಒತ್ತುವರಿ ಮಾಡಿಕೊಂಡು ಜಿ ಸೆನ್ಸ್‌ಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಈ ಜಾಗವನ್ನು ಸಕ್ರಮಗೊಳಿಸಿಕೊಡುತ್ತೇವೆಂದು ಮಾನ್ಯ ಮಂತ್ರಿಗಳು ಹಿಂದೆಯೂ ಸಹ ಹೇಳಿದ್ದರು. ಈ ರೀತಿ ಮನೆಗಳನ್ನು ಕಟ್ಟಿಕೊಂಡಿರುವವರು ಸುಮಾರು ಒಂದು ಸಾವಿರ ಜನ ಇರಬಹುದು. ಇವರೆಲ್ಲರೂ ಸಹ ಬಡವರೇ ಇವರಿಗೆ ಸರ್ಕಾರದವರು ದಂಡವನ್ನು ವಿಧಿಸಿದರೆ ಆ ದಂಡವನ್ನೂ ಸಹ ಅವರು ಕೊಡುವ ಸ್ಥಿತಿಯಲ್ಲಿ ಇರುವುದಿಲ್ಲ. ಆದ್ದರಿಂದ ಅವರಿಗೆ ದಂಡವಿಲ್ಲದೆ ಆ ಜಾಗವನ್ನು ಸಕ್ರಮಗೊಳಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿ ಯಾರಾದರು ಮನೆಗಳನ್ನು ಆಕ್ರಮ ಜಾಗಗಳಲ್ಲಿ ಕಟ್ಟಿಕೊಂಡಿದ್ದಾರೋ ಆ ಜಾಗಗಳನ್ನು ಸಕ್ರಮಗೊಳಿಸಿಕೊಡಬೇಕೆಂದು ಹೇಳಿದ್ದೇವೆ. ಬೇಕಾದರೆ ದಂಡವನ್ನು ವಿಧಿಸುವುದರಲ್ಲಿ ಪುನರ್ ಪರಿಶೀಲನೆ ಮಾಡೋಣ,ಬಡವರಿಗೆ ಒಂದು ನಾಮಿನಲ್ ರೇಟ್‌ನಲ್ಲಿ ಮಾತ್ರ ದಂಡವನ್ನು ವಿಧಿಸುತ್ತಿದ್ದೇವೆ. ಇದರಿಂದ ಅವರ ಜಾಗ ಲೀಗಲ್ ಆಗಿ ಟೈಟಲ್ ಕೊಟ್ಟ ಹಾಗೆ ಆಗುತ್ತದೆ.

ಶ್ರೀ ಬಿ. ಎ. ಉಮರಬ್ಬ.—ಮಾನ್ಯ ಅಧ್ಯಕ್ಷರೇ, ಬಡವರ ಮೇಲೆ ವಿಧಿಸುವಂತಹ ಕಡಿಮೆ ದಂಡದಲ್ಲಿ ಸರ್ಕಾರಕ್ಕೆ ಎಷ್ಟು ಆದಾಯ ಬರುತ್ತಿದೆ ? ಬಡವರು ಕೊಡುವಂತಹ ೧೦-೨೦ ರೂಪಾಯಿ ಗಳಲ್ಲಿ ಸರ್ಕಾರದ ಬೊಕ್ಕಸವೇನು ತುಂಬುವುದಿಲ್ಲ. ಪುಕ್ಕಟೆಯಾಗಿ ಅವರ ಜಾಗವನ್ನು ಸಕ್ರಮಗೊಳಿಸಿ ಕೊಡುವುದಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಮೊದಲೇ ಹೇಳಿದ ಹಾಗೆ ನಾಮಿನಲ್ ರೇಟ್‌ನಲ್ಲಿ ಮಾತ್ರ ದಂಡವಿಧಿಸುತ್ತಿದ್ದೇವೆ. ಇದರಿಂದ ಅವರಿಗೆ ಅಧಿಕಾರ ಸಿಗುತ್ತದೆ. ಲೀಗಲ್ ಟೈಟಲ್ ಸಿಗುತ್ತದೆ. ಮಾನ್ಯ ಸದಸ್ಯರು ಹೇಳಿದ್ದನ್ನು ಸಹ ಆಲೋಚನೆ ಮಾಡೋಣ.

ಶ್ರೀ ಆರ್. ವೆಂಕಟರಾವಮ್ಮಯ್ಯ.—ಸ್ವಾಮಿ ನಮ್ಮ ಜಿಲ್ಲೆಯಲ್ಲಿಯೂ ಕೂಡ ಆ ರೀತಿಯ ಮನೆ ಗಳನ್ನು ಕಟ್ಟಿಕೊಂಡಿದ್ದಾರೆ.

ಅಧ್ಯಕ್ಷರು.—ಮಾನ್ಯ ವೆಂಕಟರಾವಮ್ಮಯ್ಯನವರೇ ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಆರ್ ವೆಂಕಟರಾಮಯ್ಯ.—ಅದಕ್ಕೆ ತಾವು ಒಂದು ಟೈಮ್ ಲಿಮಿಟ್ ಮಾಡಿ, ಆದಷ್ಟು ಬೇಗ ಎಲ್ಲಾ ಕಡೆಗಳಲ್ಲಿ ಸಕ್ರಮಗೊಳಿಸಿ. ರೆವಿನ್ಯೂ ಇನ್ಸ್‌ಪೆಕ್ಟರ್ಸ್ ಮತ್ತು ಗ್ರಾಮಲೆಕ್ಕಿಗರು ಪ್ರತಿ ಯೊಂದು ಸಾರಿ ಸ್ಥಳಕ್ಕೆ ಹೋಗಿ ಲಂಚ ತೆಗೆದುಕೊಂಡು ಬರುತ್ತಾರೆ ಅದಕ್ಕೆ ಒಂದು ಟೈಮ್ ಫಿಕ್ಸ್ ಮಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಆದಷ್ಟು ಬೇಗ ಮಾಡುತ್ತೇನೆ.

ರಾಜ್ಯದಲ್ಲಿನ ಸಕ್ಕರೆ ಕಾರ್ಖಾನೆಗಳು

೩೯೬. ಶ್ರೀಮಾನ್ ಜಿ. ರಾಜಂಗೌಡ, (ಹನೂರು).—ಮಾನ್ಯ ಸಹಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಎಷ್ಟು ಸಹಕಾರ ಸಕ್ಕರೆ ಕಾರ್ಖಾನೆಗಳಿವೆ ?

ಆ) ಇವುಗಳಲ್ಲಿ ಎಷ್ಟು ಕಾರ್ಖಾನೆಗಳು ಲಾಭದಾಯಕವಾಗಿ ನಡೆಯುತ್ತಿವೆ ?

ಇ) ನಷ್ಟವನ್ನು ಅನುಭವಿಸುತ್ತಿರುವ ಕಾರ್ಖಾನೆಗಳನ್ನು ಸುಧಾರಿಸಲು ಸರ್ಕಾರದವರು ಕೈ ಗೊಂಡ ಕ್ರಮವೇನು ?

ಶ್ರೀ ಆರ್. ಎಲ್. ಜಾಲಪ್ಪ (ಮಾನ್ಯ ಸಹಕಾರಿ ಸಚಿವರು).—

ಅ) ರಾಜ್ಯದಲ್ಲಿ ಕೆಲಸ ಮಾಡುತ್ತಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳ ಸಂಖ್ಯೆ—೧೬.

ಆ) ಇವುಗಳ ಪೈಕಿ ಒಂದು ಸಹಕಾರಿ ಸಕ್ಕರೆ ಕಾರ್ಖಾನೆ ಮಾತ್ರ ಲಾಭದಾಯಕವಾಗಿ ೧೯೮೫-೮೬ನೇ ಸಾಲಿನಲ್ಲಿ ಕೆಲಸ ಮಾಡಿರುತ್ತದೆ. ೧೯೮೫-೮೬ನೇ ಸಾಲಿನಲ್ಲಿ ೪ ಸಹಕಾರಿ ಸಕ್ಕರೆ ಕಾರ್ಖಾನೆಗಳು ಲಾಭ ತೋರಿಸುವ ನಿರೀಕ್ಷೆಯಲ್ಲಿವೆ (ಏಕೆಂದರೆ ಸಕ್ಕರೆ ಬೆಲೆಯಂ ಹೆಚ್ಚಿಳದಿಂದ).

ಇ) ನಷ್ಟವನ್ನನುಭವಿಸುತ್ತಿರುವ ಕಾರ್ಖಾನೆಗಳನು ಸುಧಾರಿಸಲು ಸರ್ಕಾರದವರು ಕೈಗೊಂಡ ಕ್ರಮಗಳೆಂದರೆ.—

೧. ಆರ್ಥಿಕವಾಗಿ ಬಹಳ ಕ್ಲಿಷ್ಟ ಸ್ಥಿತಿಯಲ್ಲಿರುವ ಸಕ್ಕರೆ ಕಾರ್ಖಾನೆಗಳಿಗೆ ಸಾಫ್ಟ್ ಲೋನ್ ರೂಪದಲ್ಲಿ ಸರ್ಕಾರವು ಹಣವನ್ನು ಮಂಜೂರು ಮಾಡಿರುವುದು.

೨. ತಾವು ತಂದ ಸಾಲಗಳ ಬಾಕಿಯನ್ನು ಮರುವಿಂಗಡಣೆಯ ಕಂತುಗಳಿಗಾಗಿ ಮಾರ್ಪಡಿಸುವುದಕ್ಕೆ ಶಿಫಾರಸ್ಸು ಮಾಡುವುದು.

೩. ತಾವು ಕೊಡಬೇಕಾದ ''ಕೊಂಡ ಕರವನ್ನು'' ಬಡ್ಡಿ ರಹಿತ ಸಾಲವನ್ನಾಗಿ ಮಾರ್ಪಡಿಸಿ ಐದು ಸಮ ಕಂತುಗಳಲ್ಲಿ, ತಾವು ಕಬ್ಬು ನುರಿಯುವ ಕಾರ್ಯವನ್ನು ಪ್ರಾರಂಭಿಸಿದ ೧೦ ವರ್ಷಗಳ ನಂತರ ಮರುಪಾವತಿ ಮಾಡುವಂತೆ ಮಾಡಿರುವುದು.

೪. ತಾವು ತಮಗೆ ಕಾಯ್ದಿರಿಸಿದ ಕಬ್ಬು ಬೆಳೆಯುವ ಪ್ರದೇಶದಲ್ಲಿ ತಮ್ಮ ಕಾರ್ಖಾನೆಗೆ ಸಾಕಾಗುವಷ್ಟು ಕಬ್ಬನ್ನು ಬೆಳೆಸಿಕೊಳ್ಳುವುದಕ್ಕೆ ಆಗಾಗ್ಗೆ ಆದೇಶಗಳನ್ನು ನೀಡುತ್ತಿರುವುದು ಮತ್ತು ಕೇಂದ್ರ ಸರ್ಕಾರಕ್ಕೆ ಈ ರೀತಿ ಕಬ್ಬು ಬೆಳೆಸಿಕೊಳ್ಳುವುದಕ್ಕೆ ದೊರೆಯುವ ಆರ್ಥಿಕ ಸಹಾಯವನ್ನು ಕೊಡುವಂತೆ ಶಿಫಾರಸ್ಸು ಮಾಡುವುದು.

ಶ್ರೀ ಜಿ. ರಾಜಂಗೌಡ.—ಸ್ವಾಮಿ ಕೆಲಸ ಮಾಡದ ಇರತಕ್ಕಂಥ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬನ್ನು ಒದಗಿಸಿಕೊಟ್ಟು ಅವುಗಳಿಗೆ ಬೇಕಾದ ಸಾಧನ ಸಂಪತ್ತನ್ನು ನಾವು ಒದಗಿಸಿಕೊಡುವ ಬಗ್ಗೆ ಸಲಹೆಗಳನ್ನು ಸ್ಥಳೀಯ ಶಾಸಕರು ಕೊಡುತ್ತೇವೆ. ಆದ್ದರಿಂದ ಸ್ಥಳೀಯ ಶಾಸಕರನ್ನು ಕರೆದು ಅವರ ಸಲಹೆಗಳನ್ನು ತಾವು ಕೇಳುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.—ಸ್ವಾಮಿ, ಈಗಾಗಲೇ ಗೌರಿ ಬಿದನೂರು ಸಕ್ಕರೆ ಕಾರ್ಖಾನೆ, ಕೊಳ್ಳೇಗಾಲದ ಸಕ್ಕರೆ ಕಾರ್ಖಾನೆ, ಹಿರಿಯೂರು ಸಕ್ಕರೆ ಕಾರ್ಖಾನೆ, ಬಹ್ಮಾವರ ಸಕ್ಕರೆ ಕಾರ್ಖಾನೆ ಮಂತ್ತು ಹೇಮಾವತಿ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಇಲ್ಲದೆ ಈ ಕಾರ್ಖಾನೆಗಳು ಕಬ್ಬು ಅರಿಯದೆ ನಿಂತು ಹೋಗಿವೆ. ಕಳೆದ ನಾಲ್ಕೈದು ವರ್ಷಗಳಿಂದ ಬಾವಿಗಳಲ್ಲಿ ಕುಡಿಯುವ ನೀರು ಇಲ್ಲ. ಅಲ್ಲದೆ ಈ ಎಲ್ಲಾ ಫ್ಯಾಕ್ಟರಿಗಳನ್ನು ಸಹ ಸರ್ಕಾರದವರು ಲೇಆಫ್ ಮಾಡಿದ್ದೇವೆ. ಕೆಲವು ಜನ ಶಾಸಕರನ್ನು ಕರೆದು ಮಾತನಾಡಿದಾಗ ಅವರು ಹೇಗಾದರೂ ಮಾಡಿ ಸರ್ಕಾರ ಕಾರ್ಖಾನೆಗಳನ್ನು ವಹಿಸಿಕೊಂಡು ನಡೆಸಲೇ ಬೇಕು ಎಂದು ಹೇಳುತ್ತಾರೆ. ಈ ಕಾರ್ಖಾನೆಗಳಲ್ಲಿ ಕಬ್ಬು ಇಲ್ಲದೆ ಇದ್ದರೆ ಕಾರ್ಖಾನೆಗಳನ್ನು ನಡೆಸಿರುವುದಾದರೂ ಹೇಗೆ ? ಈ ಜಾಗಗಳಲ್ಲಿ ಜನ ತಿನ್ನುವುದಕ್ಕೆ ಕಬ್ಬಿ ಇಲ್ಲ. ನಾನೂ ಗೌರಿಬಿದನೂರು ಸಲ್ಲಿಯೇ ವಾಸ ಮಾಡುತ್ತಿದ್ದೇನೆ. ಅಲ್ಲಿನ ಪರಿಸ್ಥಿತಿ ಚೆನ್ನಾಗಿ ನನಗೆ ಗೊತ್ತು. ಈ ಭಾಗದ ಕೆರೆಗಳಾದ ತಿಪ್ಪಗೊಂಡನಪಲ್ಲಿ ಮತ್ತು ಚಪ್ಪಸಂದ್ರ ಮತ್ತು ಗುಂಡ್ಲುಂಪಲ್ಲಿ ಕೆರೆಗಳೆಲ್ಲ ಬತ್ತಿ ಹೋಗಿವೆ. ಬಾವಿಗಳಲ್ಲಿ ಕುಡಿಯುವ ನೀರಿಲ್ಲದೆ ಜನ ತೊಂದರೆ ಪಡುತ್ತಿದ್ದಾರೆ. ಮೊದಲು ಗೌರಿಬಿದನೂರು ತಾಲ್ಲೂಕಿನಲ್ಲಿ ಸುಮಾರು ೮-೧೦ ಅಡಿ ಬಾವಿ ತೋಡಿದರೆ ೪-೫ ಹೆಚ್.ಪಿ. ಮೋಟಾರ್‌ನಲ್ಲಿ ನೀರು ಎತ್ತಬಹುದಿತ್ತು. ಆದರೆ ಇವತ್ತು ಆ ಪರಿಸ್ಥಿತಿ ಇಲ್ಲ ಆ ದಿಸೆಯಲ್ಲಿ ನಾವು ಫ್ಯಾಕ್ಟರಿಗಳನ್ನು ನಡೆಸುವುದು ಬಹಳ ಕಷ್ಟವಾಗುತ್ತದೆ. ಅವಶ್ಯಕತೆ ಇದ್ದರೆ ಅಲ್ಲಿನ ಶಾಸಕರನ್ನು ಕರೆದು ನಾನು ಮಾತನಾಡುತ್ತೇನೆ.

ಶ್ರೀ ಜಿ. ರಾಜಂಗೌಡ.—ಸ್ವಾಮಿ ಕೊಳ್ಳೇಗಾಲ ಸಕ್ಕರೆ ಕಾರ್ಖಾನೆಗೆ ಸಂಬಂಧಪಟ್ಟಂತಹ ಏರಿಯಾದಲ್ಲಿ ಸುಮಾರು ೨೮ ಲಕ್ಷ ಟನ್‌ಗಳಷ್ಟು ಕಬ್ಬನ್ನು ಬೆಳೆಯುತ್ತಾರೆ. ಆದರೂ ಸಹ ಅಲ್ಲಿನ

ಕಾರ್ಖಾನೆಯನ್ನು ಮುಚ್ಚಿದ್ದೀರಿ ? ಅಲ್ಲಿ ಸರಿಯಾದ ನೀರಾವರಿ ಸೌಕರ್ಯವಿದಿದ್ದರೆ ತವಂಗೆ ೭೦ ಲಕ್ಷ ಟನ್‌ಗಳಷ್ಟು ಕಬ್ಬನ್ನು ಬೆಳೆದು ಜನ ಕೊಡುತ್ತಿದ್ದರು. ಆದರೂ ಸಹ ಆ ಕಾರ್ಖಾನೆಯನ್ನು ತಾವು ನಡೆಸಿ ಲಾಭದಾಯಕವಾಗಿ ನಡೆಸುವಂತೆ ಅಲ್ಲಿನ ಶಾಸಕರು ತಮಗೆ ಸಲಹೆ ಕೊಡುತ್ತಾರೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ಕೊಳ್ಳೆಗಾಲ ಶುಗರ್ ಫ್ಯಾಕ್ಟರಿಯಲ್ಲಿ ಒಂದು ವರ್ಷಕ್ಕೆ ಸುಮಾರು ೧೦ ಕೋಟಿ ೫೬ ಲಕ್ಷ ರೂಪಾಯಿಗಳ ನಷ್ಟವಾಗುತ್ತದೆ. ಕಳೆದ ಮೂರು ವರ್ಷಗಳಿಂದ ಅಲ್ಲಿ ಕಬ್ಬು ಇಲ್ಲ. ಸುಮಾರು ೧೮೮ ಲಕ್ಷ ರೂಪಾಯಿಗಳನ್ನು ಬೆಳಿಗಾರರ ಸಾಲವನ್ನು ತೀರಿಸುವುದಕ್ಕೆ ಮತ್ತು ಅಲ್ಲಿ ಕೆಲಸ ಮಾಡುತ್ತಿರುವ ನೌಕರರ ಸಂಬಳಕ್ಕೆ ಕೊಡುತ್ತಿದ್ದೇವೆ. ಇನ್ನು ಸುಮಾರು ೪೦ ಲಕ್ಷ ರೂಪಾಯಿಗಳ ಬಾಕಿ ಇದೆ. ಆ ಕಾರ್ಖಾನೆಯನ್ನು ನಡೆಸುವಂತಹ ಸ್ಥಿತಿಯಲ್ಲಿ ಸರ್ಕಾರ ಇಲ್ಲ. ಬೇಕೆಯವರಿಗೆ ಕೊಡಬೇಕೆಂದು ಸರ್ಕಾರ ಅಡ್ವರ್‌ಟೈಜ್‌ಮೆಂಟ್ ಮಾಡಿದೆ,

ಶ್ರೀ ಜಿ. ರಾಜುಗೌಡ.—ಸ್ವಾಮಿ ಸ್ಥಳೀಯ ಶಾಸಕರನ್ನು ಕರೆಸಿ, ಅವರು ತಮಗೆ ಸಲಹೆ ಕೊಡುತ್ತಾರೆ ?

ಶ್ರೀ ಆರ್. ಎಲ್. ಜಾಲಪ್ಪ.—ಅವಶ್ಯಕತೆ ಬಿದ್ದರೆ ಸ್ಥಳೀಯ ಶಾಸಕರನ್ನು ಕರೆಸಿ ಮಾತನಾಡುತ್ತೇನೆಂದು ಹೇಳಿದ್ದೇನೆ.

ಶ್ರೀ ಜಿ. ರಾಜುಗೌಡ.—ಸ್ವಾಮಿ ಲಾಭದಲ್ಲಿ ನಡೆಯುವಂತೆ ಸಲಹೆಗಳನ್ನು ಶಾಸಕರು ಕೊಡುವಾಗ ತಾವು ಏತಕ್ಕೆ ಕರೆಸಬಾರದು ?

ಶ್ರೀ ಆರ್. ಎಲ್. ಜಾಲಪ್ಪ.—ಸ್ವಾಮಿ ಅವರು ತಮ್ಮ ಸಲಹೆಗಳು ಏನಾದರೂ ಇದ್ದರೆ ಬರವಣಿಗೆಯ ಮೂಲಕ ಬರೆದು ಕಳುಹಿಸಿಕೊಡಲಿ ನಾನು ಅದನ್ನು ಕನ್ಸಿಡರ್ ಮಾಡುತ್ತೇನೆ.

ಶ್ರೀ ಯು. ಭೂಪತಿ.—ಸ್ವಾಮಿ, ಮಾನ್ಯ ಸಹಕಾರ ಸಚಿವರು ಕಬ್ಬು ಸಿಗುವುದಿಲ್ಲವೆನ್ನುವ ಮಾತನ್ನು ಹೇಳಿದರು...

ಅಧ್ಯಕ್ಷರು.—ನಾನು ತಮಗೆ ಆಗಲೇ ಒಂದು ಅವಕಾಶವನ್ನು ಕೊಟ್ಟಿದ್ದೇನೆ. ಎಷ್ಟು ಸಾರಿ ಎದ್ದು ನಿಂತು ಮಾತನಾಡುತ್ತೀರಿ. ಈ ರೀತಿ ಮಾಡಿದರೆ ತಮಗೆ ನಾನು ಇನ್ನೊಂದು ಸಾರಿ ಅವಕಾಶ ಮಾಡಿ ಕೊಡುವುದಿಲ್ಲ. ದಯವಮಾಡಿ ಕುಳಿತುಕೊಳ್ಳಿ.

ಬಿ.ಜಿ.ಎಂ.ಎಲ್. ಮತ್ತು ಬಿ.ಇ.ಎಂ.ಎಲ್. ಗಳ ಮೇಲೆ ಹಾಕಿರುವ ಟ್ಯಾರಿಫ್ ದರ ಮತ್ತು ಈ ಕಾರ್ಖಾನೆಗಳು ಉಪಯೋಗಿಸಿದ ವಿದ್ಯುತ್

೨೦೬. ಶ್ರೀ ಟಿ.ಎಸ್. ಮಣಿ.—ಮಾನ್ಯ ವಿದ್ಯುತ್ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಎನ್‌ಜಿ.ಇ.ಎಫ್, ಜಿ.ಇ.ಎಫ್ ಮತ್ತು ಇತರ ಸರ್ಕಾರದ ಸ್ವಾಮ್ಯದ ಕೈಗಾರಿಕೆಗಳು ಹರಿಹರ ಪಾಲಿಫೈಬರ್, ಜಿಂದಾಲ್ ಮತ್ತು ಮೈಕೋಗಳನ್ನು ಸೇರಿದಂತೆ ವಿಧಿಸಿರುವ ಟ್ಯಾರಿಫ್ ದರವೇನು ?

ಆ) ಬಿ.ಜಿ.ಎಂ.ಎಲ್. ಮತ್ತು ಬಿ.ಇ.ಎಂ.ಎಲ್.ಗಳ ಮೇಲೆ ಹಾಕಿರುವ ಟ್ಯಾರಿಫ್ ದರ ಮತ್ತು ಈ ಕಾರ್ಖಾನೆಗಳು ಉಪಯೋಗಿಸಿದ ವಿದ್ಯುತ್.

ಇ) ಹೆಚ್ಚಿನ ಟ್ಯಾರಿಫ್ ದರದಿಂದಾಗಿ ಬಿ.ಜಿ.ಎಂ.ಎಲ್. ನಷ್ಟ ಹೊಂದುತ್ತಿದ್ದು ಅದನ್ನು ಮುಚ್ಚುವುದಾಗಿ ಕೇಂದ್ರ ಮಂತ್ರಿಗಳ ಹೇಳಿಕೆ ಸರ್ಕಾರಕ್ಕೆ ತಿಳಿದಿದೆಯೆ, ಇದರ ಬಗ್ಗೆ ರಾಜ್ಯ ಸರ್ಕಾರದ ಪ್ರತಿಕ್ರಿಯೆ ಏನು ?

ಈ) ಶಿವನಸಮುದ್ರವನ್ನು ಬಿ.ಜಿ.ಎಂ.ಎಲ್.ನ ಕ್ಯಾಪ್‌ಟೀವ್ ಪವರ್ ಪ್ಲಾಂಟ್ ಮಾಡಲು ಭಾರತ ಸರ್ಕಾರದ ಬೇಡಿಕೆ ಇದೆಯೇ, ಹಾಗಾದರೆ ಈ ಬಗ್ಗೆ ರಾಜ್ಯ ಸರ್ಕಾರದ ಪ್ರತಿಕ್ರಿಯೆ ಏನು ?